ನಾನು ರವಿಯಲ್ಲಿ ಬಯಸುತ್ತಿರುವುದಾದರೂ ಏನು? ಆಸ್ತಿ, ಅಂತಸ್ತು, ಐಶ್ವರ್ಯ, ಯಶಸ್ಸು, ಏಳಿಗೆ...!

ದೇವರೇ, ಪ್ರೀತಿಗಳ ಬಗ್ಗೆ ನಾ ಏನು ಹೇಳಲಿ? ಪ್ರೀತಿಗಳೇಕೆ ಪುಸ್ತಕದಲ್ಲಿಯಂತೆ, ಪುರಾಣ ಕತೆಗಳಂತೆ, ಅಖಂಡವಾಗಿ ಅಖಂಡ ಕಾಲದವರೆಗೂ ಅಲ್ಲಾಡದಂತೆ ನಿಲ್ಲುವುದಿಲ್ಲ? ಬದುಕಿನ ಸಣ್ಣ ಸಣ್ಣ ಸೋಲು– ಗೆಲುವುಗಳಲ್ಲಿ ಮುಗ್ಗರಿಸಿ ಬೀಳುತ್ತವಲ್ಲ. ಅವನನ್ನು ಅವನಿರುವಂತೆ ಗೌರವಿಸಲಾರದ್ದು, ಪ್ರೀತಿಸಲಾರದ್ದು, ಸಹಜವೆ, ಸ್ವಾಭಾವಿಕವೆ? ಇಲ್ಲ ನನ್ನ ದೌರ್ಬಲ್ಯವೇ? ನಾನೇಕೆ ಅವನನ್ನು ಅವನಿರುವಂತೆ ತಟ್ಟದೆ, ಕುಟ್ಟದೆ, ಕರಗಿಸದೆ, ಅಚ್ಚೊತ್ತದೆ, ಬದಲಿಸದೆ, ಸ್ವೀಕರಿಸಲು ಸಿದ್ಧವಿಲ್ಲ?

ಬೆಳಿಗ್ಗೆ ಕೂಡ ನೋಟೀಸ್ ಬೋರ್ಡ್ ನೋಡಿದಾಗ ಮತ್ತೆ ಕೊರೆದಿದ್ದೆ–

“ರವಿ, ಅದ್ಯಾವುದೋ ‘ತರಬೇತಿ’ ಅಂತ ಹಾಕಿದ್ದಾರೆ ನೋಡಿದೆಯಾ? ಮೂರು ತಿಂಗಳ ಕೋರ್ಸ್ ಅಷ್ಟೆ, ಸರ್ಟಿಫಿಕೇಟ್ ಬೇರೆ ಕೊಡ್ತಾರೆ...” ಎಂದಿದ್ದೆ.

“ಆಗಲೇ ನೋಡಿದ್ದೆ ಶಶಿ. ವಾರಕ್ಕೆ ಆರು ದಿನ. ಅದೂ ಕಾರ್ಖಾನೆ ಮುಗಿದ ಮೇಲೆ 6 ರಿಂದ 8 ರವರೆಗೆ! ಸಾಲದ್ದಕ್ಕೆ ಭಾನುವಾರ ಬೇರೆ ಇದೆ. ನನ್ನ ಕೆಲಸಕ್ಕೇನೂ ಅದರ ಅವಶ್ಯಕತೆ ಇಲ್ಲ ಬಿಡು.”

“ನಿನ್ನ ಕೆಲಸಕ್ಕೆ ಯಾವುದರ ಅವಶ್ಯಕತೆಯೂ ಇಲ್ಲ. ಅಂತ ಗೊತ್ತು. ಮತ್ಯಾವುದಾದರೂ ಕೆಲಸಕ್ಕೆ ಉಪಯೋಗವಾಗೋಲ್ಲವಾ? ಆಮೇಲೆ ಬೇಕಾದರೆ ಖಾಸಗಿಯಾಗಿ ಏನಾದರೂ ಶುರು ಮಾಡಬಹುದು...” ನಾನು ಅಸಹನೆಯಿಂದ ಹೇಳಿದೆ.

“ಶಶಿ, ಸ್ವಂತ ಏನೇನೋ ಮಾಡೋದು. ಕೈ ಸುಟ್ಟುಕೊಳ್ಳೋದು ಏಕೆ?”

“ನಿನಗೆ ಏತರಲ್ಲೂ ಉತ್ಸಾಹವೇ ಇಲ್ಲ. ಹೊಸತೇನಕ್ಕೂ ಕೈ ಹಾಕೋ ಸಾಹಸವೇ ಇಲ್ಲ” ನಾನು ರೇಗಿದೆ.

“ಶಶಿ, ನನ್ನ ಕೆಲಸದಲ್ಲಿ ಆರಾಮಿದ್ದೇನೆ. ಸ್ವಂತ ಉದ್ಯೋಗ, ಲಾಭವೇ ಆದರೂ ದಿನದ 24 ಗಂಟೆ ತಲೆ ನೋವು ಶ್ರಮ ಯಾತಕ್ಕೆ ಬೇಕು? ಬಿಡುವಾಗಲೀ, ದುಡಿದಿದ್ದ ಅನುಭವಿಸುವ ಸಮಯವಾಗಲೀ ಎಲ್ಲಿರುತ್ತೆ? ಎಂಟು ಗಂಟೆಯ ಈ ಕೆಲಸಕ್ಕೆ ಬಂದರೆ ಆಯಿತು. ಕೈ ತುಂಬಾ ಸಂಬಳ. ಅದೂ ಎಂಟು ಗಂಟೆಯೂ ಮೇಜಿಗಂಟೆ ದುಡಿಯಬೇಕೆ? ಕಾಲು ಚಾಚಿ ನಾಲ್ಕು ಗಂಟೆ ಕೂತರೂ, ಕ್ಯಾಂಟೀನಿನಲ್ಲಿ ಅರ್ಧ ಗಂಟೆ ಕಾಫಿ ಕುಡಿದರೂ, ಲೈಬ್ರರಿಯಲ್ಲಿ ನಿದ್ದೆ ಹೊಡೆದರೂ ಸಮಯ ಕಳೆಯುತ್ತೆ. ಜೀವನದಲ್ಲಿ ಸಂತೃಪ್ತಿ ಇದ್ದರೆ ಸಾಲದೆ? ಸುಂದರ್‌ನೇ ನೋಡು, ಏನೋ ಸಂಜೆ ಎರಡು ಮೂರು ಗಂಟೆ ಮಾಡ್ತೀನಿ ಅಂತ ಪ್ರಾರಂಭಿಸಿದವನು ಇವತ್ತು ಬೆಳಗ್ಗೆ ಏಳರಿಂದ ರಾತ್ರಿ ಹತ್ತರವರೆಗೂ ಒದ್ದಾಡ್ತಾನೆ...”

“ಆದಕ್ಕೆ ತಕ್ಕ ಹಾಗೆ ಲಕ್ಷ ಸಂಪಾದಿಸುತ್ತಿದ್ದಾನೆ...” ನಾನು ಒರಟಾಗಿ ರೇಗಿದೆ. ಅವನ ದೃಷ್ಟಿಯಲ್ಲಿ ಬದುಕನ್ನು ನೋಡಲು ನನಗೆ ಸಾಧ್ಯವೇ ಇರಲಿಲ್ಲ.

“ಶಶಿ, ಅಷ್ಟೆಲ್ಲ ಹಣ ನಿಜಕ್ಕೂ ನಮಗೆ ಬೇಕಾ?...” ಸಂತೈಸುವಂತೆ ಕೇಳಿದ. “ಮನೆ ಇದೆ. ನಮ್ಮಿಬ್ಬರ ಸಂಬಳದಲ್ಲಿ ನೆಮ್ಮದಿಯ ಬದುಕಿದೆ. ಇಲ್ಲದ ಗೊಡವೆ ಏಕೆ?...”

“ನಿಜ. ಆದರೆ ಸುಂದರ್ ಸಂಪಾದಿಸುವುದು ಹಣ ಒಂದನ್ನೇ ಏನು? ನಮ್ಮ ಬದುಕು ಇಷ್ಟೇನೆ? ತಿಂದುಂಡು ಮಲಗುವ, ಹೇಗಾದರೂ ಆಫೀಸಿನಲ್ಲಿ ಎಂಟು ಗಂಟೆ ಕಳೆವ ಪುನರಾವರ್ತನೆಯ ಪ್ರಕ್ರಿಯೆಯೆ?”